[ Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 333/2023**

ಪಿ.ಡಬ್ಲ್ಯು ಃ 5 ಸಿ.ಡಬ್ಲ್ಯು ಃ 7

ಸಾಕ್ಷಿದಾರನ ಹೆಸರು ಃ ವಾಸಪ್ಪ ನಾಯ್ಕ

ತಂದೆಯ ಹೆಸರು ಃ ಅಣ್ಣು ನಾಯ್ಕ

ಪ್ರಾಯ ಃ 62 ವರ್ಷ

ಉದ್ಯೋಗ ಃ ನಿವೃತ ಸಹಾಯಕ ಉಪನೀರಿಕ್ಷಕರು

ವಾಸ ಃ ಅತ್ರಾಡಿ, ಉಡುಪಿ

ದಿನಾಂಕ 10.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ದಿನಾಂಕ 07.08.2020 ರಿಂದ 31.03.2023 ರವರೆಗೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಉಪನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26.11.2022 ರಂದು ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಅಕ್ರ 170/2022 ರಂತೆ ಪ್ರಕರಣ ದಾಖಲಾಗಿದ್ದು, ಮೇಲಾಧಿಕಾರಿಯವರ ಆದೇಶದಂತೆ ಆರೋಪಿ ಹಾಗೂ ಸೊತ್ತು ಪತ್ತೆಗಾಗಿ ವಿಶೇಷ ತಂಡವನ್ನು ರಚಿಸಿ ಕಳುಹಿಸಿಕೊಟ್ಟಿರುತ್ತೇನೆ.

ದಿಃ27.11.2022 ರಂದು ಪೊಲೀಸ್ ಸಿಬ್ಬಂದಿಯವರು ಉಡುಪಿಯ ಇಂದ್ರಾಳಿ ಕಡೆಯಿಂದ ಓರ್ವ ಆಕ್ಟಿವ್ ಹೊಂಡ ಕೆಎ-20-ಇಕೆ-3084 ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ ನಿಲ್ಲಿಸದೆ ತನ್ನ ಆಕ್ಟಿವ ಸ್ಕೂಟರನ್ನು ಚಲಾಯಿಸಿಕೊಂಡು ಹೋದನು. ತಕ್ಷಣ ನಮ್ಮ ಸಿಬ್ಬಂದಿಯವರು ತಮ್ಮ ವಾಹನದಲ್ಲಿ ಆತನನನ್ನು ಹಿಂಬಾಳಿಸಿಕೊಂಡು ಹೋಗಿ ಕಡಿಯಾಳಿ ಜಂಕ್ಷನ್ ಬಳಿ ಸುತ್ತುವರಿದು ಹಿಡಿದು ಹೆಸರು ಮತ್ತು ವಿಳಾಸ ಕೇಳಲಾಗಿ ಸರಿಯಾದ ವಿಳಾಸವನ್ನು ನೀಡದೆ ಇರುವುದರಿಂದ ಎಂ ಒ ಬಿ ಪಟ್ಟಿಯಲ್ಲಿ ಆತನ ಮುಖದ ಚಹರೆಯನ್ನು

ಗುರುತಿಸಿಕೊಂಡು ಕೂಲಂಕುಶವಾಗಿ ವಿಚಾರಿಸಲಾಗಿ ತಾನು ಹರ್ಷಿತ್ ಅವಿನಾಶ್ ಡೊದ್ರೆ ಎಂಬುದಾಗಿ ಹೆಸರನ್ನು ತಿಳಿಸಿದ್ದು ತಕ್ಷಣ ಉಡುಪಿ ನಗರ ಠಾಣೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಿಸಲಾಗಿ ತಾನು ಬಲಾಯಿಪಾದೆ ಹತ್ತಿರದಲ್ಲಿಇರುವ ಹರ್ಬಲ್ ಅಂಗಡಿಗೆ ಹೋಗಿ ಕಳುವು ಮಾಡಿರುವುದಾಗಿ ಒಪ್ಪಿ ಕೊಂಡಿರುತ್ತಾನೆ. ತಕ್ಷಣ ನಮ್ಮ ಸಿಬ್ಬಂದಿಯವರು ಆತನನ್ನು ವಶಕ್ಕೆ ಪಡೆದು ಸಮಯ ಸುಮಾರು ಬೆಳಿಗ್ಗೆ 10.15 ಗಂಟೆಗೆ ಠಾಣೆಯಲ್ಲಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ.

ನಾನು ಪಂಚರಾದ ಸದಾಶಿವ ಮತ್ತು ಮಾರುತಿ ಎಂಬುವವರನ್ನು ಪೊಲೀಸ್ ನೋಟಿಸು ನೀಡಿ ತನಿಖೆಗೆ ಸಹಕರಿಸುವಂತೆ ಕೋರಿಕೊಂಡು ಅವರು ಅದನ್ನು ಒಪ್ಪಿ ಬಂದಿರುತ್ತಾರೆ. ತಕ್ಷಣ ಆರೋಪಿಯ ಕಬೂಲಾತಿ ಹೇಳಿಕೆಯನ್ನು ಪಡೆದುಕೊಂಡು, ಸದರಿ ಹೇಳಿಕೆಯಲ್ಲಿ ಕೃತ್ಯವನ್ನು ಎಸಗಿದ ಸ್ಥಳವನ್ನು ತಾವು ಬಂದಲ್ಲಿ ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಪಂಚರನ್ನು ಕರೆದುಕೊಂಡು ಹೋಗಿ ಆಕ್ಟಿವ್ ಹೊಂಡಾ ಸ್ಕೂಟರ್ ಕೆಎ-20-ಇಕೆ-3084 ಹಾಗೂ ಹೆಲ್ಮೆಟ್, ರೈನ್ ಕೋಟ್, ಪ್ಯಾನರ್ ಮತ್ತು ಹಸಿರು ಬಣ್ಣದ ಟಾರ್ಚ್ ನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ. ಆತನ ಅಂಗಜಪ್ತಿ ಮಾಡಿದಾಗ ಆತನ ಕಿಸೆಯಲ್ಲಿ ರೂ.19,800/- ಗಳನ್ನು ಸ್ವಾಧೀನಪಡಿಸಿಕೊಂಡಿರುತ್ತೇನೆ.

ನಂತರ ಅದೇ ದಿನ ಬೆಳಿಗ್ಗೆ 10.45 ಗಂಟೆಗೆ ಆರೋಪಿಯನ್ನು ಪಂಚರ ಸಮಕ್ಷಮ ದಸ್ತಗಿರಿ ಮಾಡಿ ಆರೋಪಿಯನ್ನು ಹಾಗೂ ಸೊತ್ತುಗಳನ್ನು ಸೊತ್ತು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿ॥01.12.2022 ರಂದು ಚಾಸಾ-25 ರವರು ಒಂದು ಮನವಿ ಪತ್ರ ನೀಡಿ ಕಾರ್ಕಳ ಗ್ರಾಮಾಂತರ ಠಾಣಾ ಅಕ್ರ ನಂ. 141/22 ಕ್ಕೆ ಸಂಬಂಧಿಸಿದಂತೆ ಉಡುಪಿ ಠಾಣಾ ಅಕ್ರ 170/22 ರ ಪ್ರ ವ ವರದಿ, ಪಿರ್ಯಾದು, ಕಬೂಲಾತಿ ಹೇಳಿಕೆ, ದಸ್ತಗಿರಿ ಮಹಜರು, ದಸ್ತಗಿರಿ ತಿಳುವಳಿಕೆ ಪತ್ರ ಮತ್ತು ಸೊತ್ತು ಸ್ವಾ ಧೀನತಾ ಮಹಜರು ಹಾಗೂ ಸೊತ್ತು ಸ್ವಾಧೀನತಾ ಪಟ್ಟಿಯ ನಕಲನ್ನು , ಮಾನ್ಯ ಸರ್ವೋಚ್ಚ ನ್ಯಾಯಾಲಯದ 11 ನಿರ್ದೇಶನಗಳ ಪಟ್ಟಿಯ ನಕಲನ್ನು ಕೇಳಿದ್ದು ಅದನ್ನು ಮೇಲಾಧಿಕಾಯವರ ಬಳಿ ಮೌಖಿಕವಾಗಿ ಕೇಳಿ ಅದೇ ದಿನ ಮೇಲಾಧಿಕಾರಿಯವರ ಆದೇಶದಂತೆ ಠಾಣಾ ಪ್ರಭಾರದಲ್ಲಿದ್ದ ಠಾಣಾಧಿಕಾರಿಯಲ್ಲಿ ನಕಲು ಪ್ರತಿಯನ್ನು ನೀಡುವಂತೆ ಸೂಚಿಸಿರುತ್ತೇನೆ.

ಅದೇ ಪ್ರಕಾರ ಹೆಚ್ ಸಿ 1122 ಬಸಿರ್ ರವರು ಯಥಾ ಪ್ರತಿಯನ್ನು ತಮ್ಮ ಸಹಿ ಹಾಕಿ ನೀಡಿರುತ್ತಾರೆ.

ಸಾಕ್ಷಿಯು ಆರೋಪಿಯ ದಸ್ತಗಿರಿ ಮತ್ತು ಸೊತ್ತು ಸ್ವಾಧೀನತಾ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಪಾನರ್ ಹಾಗೂ ದ್ವಿಚಕ್ರ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಂ ಐ ಕೆ ವಕೀಲರಿಂದ ಃ

ನಾನು ಆರೋಪಿ ಯ ಪತ್ತೆಗಾಗಿ ಯಾವುದೇ ವಿಶೇಷ ತಂಡವನ್ನು ನೇಮಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಪಂಚರ ಸಮಕ್ಷಮ ದಸ್ತಗಿರಿ ಮಾಡಿರುವುದಿಲ್ಲ, ಆರೋಪಿ ಯಾವುದೇ ಕಬೂಲಾತಿ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಸ್ತಗಿರಿ ಮಹಜರು ಸೊತ್ತು ಸ್ವಾ ಧೀನತ ಮಹಜರು ಮಾಡಿ ಆರೋಪಿಯಿಂದ ಯಾವುದೇ ಸೊತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಯಾವುದೇ ದಾಖಲೆಗಳನ್ನು ವರ್ಗಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಶಪಡಿಸಿಕೊಂಡಿದ್ದೇನೆ ಎನ್ನುವ ಸೊತ್ತುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ